
**ಕವಿತೆ**




## ಕನಕರಾಜ್ ಆರನಕಟ್ಟೆ

ಕಲೆ: ಬಸವರಾಜ ಎನ್. ಕಲೆಗಾರ


# ಮೈಯ ತುಂಬ ವಸಂತಗಳ ಕುರುಹು



ಇರಿವ
ಬಿಸಿಲ ಕೋಲಿಗೆ
ಉರಿವ
ನೀರ ತೊರೆಗೆ
ಕಾಲಿಟ್ಟು
ಮೈಯಿಟ್ಟು
ನಲಿದ ಕುಣಿದಾಟಕ್ಕೆ
ಹತ್ತಾರು ವಸಂತಗಳು!

ಬತ್ತಿ ಹೋದ ಮಕರಂದ
ಬುಗ್ಗನೆ ಚಿಮ್ಮಿ
ಆಕಾಶಕ್ಕೆ
ಎಗರಿದ ಚಣಗಳು
ನೆನಪು ಮಾತ್ರ ಈಗ!

ಹರಡಿ
ಮಂಜು
ಧಗಧಗನೆ
ಒಡಲ ನುಂಗಿದ
ಉನ್ಮಾದ ಕಂಗಳೊಳಗೀಗ
ಪಾದರಸ!

ಮರಳಿ
ಅರಳಿ
ಮಣ್ಣಾಗಿ
ಕಲ್ಲಾಗಿ
ಹುಟ್ಟಿದ ತಾಣಕ್ಕೇ ಓಡುವ
ನದಿಯ ವಯ್ಯಾರ
ಮೂಳೆ ಮಾಂಸದ ತಡಿಕೆ!

ಮುಖ ಮಾಡಿ
ಕೆಳಗೆ
ಹಾಯುತ್ತಿರುವ ಬೆಂಕಿ
ಚಿಲುಮೆಯ ಸುಟ್ಟು
ಕರಕಲಾಗಿಸಿ ಬೇರ
ಬುವಿಯ ಭಸ್ಮಗೊಳಿಸುತ್ತಿರುವುದು
ಈ ಹೊತ್ತಿನ ಸುದ್ದಿ!

ಇಗೊ,
ವಸಂತಗಳಿದ್ದ ಕುರುಹು
ಮೈಯ ತುಂಬಾ!
ಹನಿಗಾಗಿ ಕಾದಿದ್ದ ಗಳಿಗೆ
ಮನಸ್ಸ ತುಂಬಾ!
ಎಲ್ಲವೂ ಈಗ
ನೀರಜ್ವಾಲೆಯಲಿ
ಉಯ್ಯಾಲೆ!